**ದಿನಾಂಕಃ 13-10-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದಃ**

ಕಳೆದ 35 ವರ್ಷಗಳಿಂದ ನಾನು ಭದ್ರವಾತಿ ತಾಲ್ಲೂಕಿನ ದಾನವಾಡಿ ಗ್ರಾಮದಲ್ಲಿ ವಾಸವಾಗಿದ್ದೇನೆ. ಅಲ್ಲಿ ನನ್ನ ಸ್ವಂತ ವಾಸದ ಮನೆ ಇರುತ್ತದೆ. ನಾನು ವಾಸ ಮಾಡುತ್ತಿರುವ ಮನೆಗೆ ಸಂಬಂಧಪಟ್ಟಂತೆ ರೇಶನ್ ಕಾರ್ಡ , ಆಧಾರ ಕಾರ್ಡ ಮತ್ತು ಚುನಾವಣಾ ಗುರುತಿನ ಚೀಟಿ ಇದೆ. ಆ ಮನೆಯಲ್ಲಿ ನಾನು , ನನ್ನ ಹೆಂಡತಿ ಮತ್ತು ನನ್ನ ಮಕ್ಕಳು ವಾಸವಾಗಿರುತ್ತೇವೆ. ನನಗೆ ಇಬ್ಬರು ಮಕ್ಕಳು. ನಾನು ರಾಣೇಬೆನ್ನೂರು ತಾಲ್ಲೂಕಿನ ಕರೂರಿನಲ್ಲಿ ವಾಸವಾಗಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ಸದರಿ ಕರೂರಿಗೆ ಯಾವ ಪೋಸ್ಟ ಇದೆ ಎಂದು ಹೇಳಲಿಕ್ಕೆ ಬರುವುದಿಲ್ಲ. ನಾನು ಅಪಘಾತದ ನಂತರ ಕರೂರಿನಲ್ಲಿ ಯಾರ ಮನೆಯಲ್ಲಿ ಇದ್ದೆ ಎಂಬುದು ನೆನಪಿಲ್ಲ. ದ್ವಿ ಚಕ್ರ ವಾಹನ ಬಜಾಜ ಪ್ಲಾಟಿನಂ ವಾಹನವು ಮಾರುತಿ ತಂದೆ ಈರಪ್ಪ ಸಾಃ ಎಡೆಹಳ್ಳಿ ತಾಃ ಭದ್ರಾವತಿ ಗೆ ಸೇರಿರುತ್ತದೆ ಎಂದರೆ ಸರಿ . ದಾನವಾಡಿ ಗ್ರಾಮ ಎಡೆಹಳ್ಳಿ ಗ್ರಾಮದಿಂದ 15 ಕಿ.ಮೀ ದೂರ ಇರುತ್ತದೆ ಎಂದರೆ ಸರಿ . ಸದರಿ ಮಾರುತಿ ರವರು ನನ್ನ

ಚಿಕ್ಕಪ್ಪನ ಮಗ ಆಗಬೇಕು. ನಾನು ಪೋಲೀರ ಮುಂದೆ ಸದರಿ ಮಾತು ನನ್ನ ಚಿಕ್ಕಪ್ಪನ ಮಗ ಎಂದು ಹೇಳಿಕೆ ನೀಡಿರುವುದಿಲ್ಲ. ಸದರಿ ಬೈಕ್ ನ್ನು ನಾನು ಮಾರುತಿ ರವರಿಂದ ಕ್ರಯಕ್ಕೆ ಪಡೆದಿರುವುದಿಲ್ಲ. ಸದರಿ ಬೈಕ್ ನ್ನು ನಾನು ಕೆಲಸಕ್ಕೆಂದು ಅವರಿಂದ ತೆಗೆದು ಕೊಂಡು ಹೋಗಿದ್ದೆ. ಬೈಕ್ ನಲ್ಲಿ ನನ್ನ ಜೊತೆ ಕುಳಿತದ್ದಂತಹ ವೀರೇಶ ನನಗೆ ಪರಿಚಯ ಇರುತ್ತಾರೆ. ಸದರಿ ಬೈಕ್ ನ್ನು ನಾನು 2 ನೇ ತಿಂಗಳು 2023 ನೇ ಇಸವಿಯಲ್ಲಿ ತೆಗೆದು ಕೊಂಡು ಹೋಗಿದ್ದೆ. ನಾನು ಸದರಿ ಈರೇಶ ರವರನ್ನು ದಾನವಾಡಿಯಿಂದ ಕರೆದು ಕೊಂಡು ತರಿಕೆರೆಗೆ ಹೋಗಿದ್ದೆ. ತರಿಕೆರೆಯಿಂದ ವಾಪಸ್ಸು ಭದ್ರಾವತಿಗೆ ಬಂದಿದ್ದೆ. ಅಪಘಾತದ ರಸ್ತೆಯಲ್ಲಿ ವಾಹನಗಳ ದಟ್ಟಣೆ ಸಂಜೆಯ ಸಮಯದಲ್ಲಿ ಜಾಸ್ತಿ ಇರುತ್ತದೆ ಎಂದರೆ ಸರಿ. ಅಪಘಾತ ಸ್ಥಳದ 15 ಅಡಿ ಹಿಂದೆ ಎಂ.ಎಲ್.ಎ ಸಂಗಣ್ಣ ನವರ ಮನೆ ಬರುತ್ತದೆ ಎಂದರೆ ಸರಿ. ಸದರಿ ಸಂಗಣ್ಣನವರ ರವರ ಮನೆಯ ಮುಂದೆ ಎರಡು ಹಂಪ್ಸಗಳನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವಾದ ರಸ್ತೆ ಅಂದಾಜು 15 ಅಡಿ ಅಗಲ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಕಣ್ಣಿನ ದೃಷ್ಠಿ ಚೆನ್ನಾಗಿ ಇದೆ. ಸದರಿ ರಸ್ತೆಯಲ್ಲಿ ಏಕ ಕಾಲಕ್ಕೆ ವಾಹನಗಳು ಹೋಗಲು ಆಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈರೇಶ ನನಗೆ 2–3 ವರ್ಷಗಳಿಂದ ಪರಿಚಯ. ಎಂ.ಎಲ್.ಎ ಸಂಗಣ್ಣ ನವರ ಮನೆಯ ಹತ್ತಿರದಲ್ಲಿ ವಾಹನಗಳನ್ನು ನಿಲ್ಲಿಸಲು ವ್ಯವಸ್ಥೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಲಾರಿಯು ನನ್ನ ವಾಹನದ ಹಿಂದುಗಡೆ ಬಂದು ಡಿಕ್ಕಿ ಹೊಡೆದಿರುತ್ತದೆ. ನಾನು ರಸ್ತೆಯ ಎಡಭಾಗದಲ್ಲಿ ಬಿದ್ದಿರುತ್ತೇನೆ. ಅಪಘಾತದ ರಸ್ತೆಯ ಅಂಚಿನಿಂದ 2 ಅಡಿ ದೂರದಲ್ಲಿ ಬಾಕ್ಸ ಚರಂಡಿ ಇರುತ್ತದೆ ಎಂದರೆ ದೂರ ಇದೆ ಎಂದು ನುಡಿಯುತ್ತಾರೆ. ಲಾರಿಯ ಬಲಬದಿಯು ನನ್ನ ದ್ವಿಚಕ್ರ ವಾಹನದ ಹಿಂದುಗಡೆ ಡಿಕ್ಕಿ ಪಡಿಸಿರುತ್ತದೆ. ನಾನು ಪೋಲಿಸರಿಗೆ ದ್ವಿಚಕ್ರ ವಾಹನವನ್ನು ನಾನೇ ಚಲಾಯಿಸುತ್ತಿದ್ದೆ ಎಂದು ಎಲ್ಲಿಯೂ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ವಾಹನದಲ್ಲಿದ್ದ ಹಿಂಬದಿ ಸವಾರನಿಗೂ ಅಲ್ಪ–ಸ್ವಲ್ಪ ಗಾಯಗಳಾಗಿದ್ದವು. ಸದರಿ ಈರೇಶ ವಾಹನವನ್ನು ಚಲಾಯಿಸುತ್ತಿದ್ದು ಸದರಿಯವನಿಗೆ ಚಾಲನಾ ಪರವಾನಿಗೆ ಇಲ್ಲದ ಕಾರಣ ನಾನೇ ವಾಹನವನ್ನು ಚಲಾಯಿಸುತ್ತಿದ್ದೆ ಎಂದು ಸುಳ್ಳು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಗ ಭರತಕುಮಾರ ಅಪಘಾತಕ್ಕೆ ಸಂಬಂಧಪಟ್ಟಂತೆ ದೂರನ್ನು ಕೊಟ್ಟಿರುತ್ತಾನೆ. ದೂರಿನಲ್ಲಾಗಲೀ , ನಾನು ಕೊಟ್ಟ ಹೇಳಿಕೆಯಲ್ಲಾಗಲೀ ನಾನೇ ದ್ವಿಚಕ್ರವನ್ನು ಚಲಾಯಿಸುತ್ತಿದ್ದೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಲಾರಿಯ ಚಾಲಕನು ಆ ದಿನ ಎಫ್.ಸಿ ಮಾಡಿಸಲು ತನ್ನ ಲಾರಿಗೆ ಪೇಂಟ್ ಮಾಡಿಸಿಕೊಂಡು ಸಂಚಾರಿ ನಿಯಮಗಳನ್ನು ಪಾಲಿಸುತ್ತಾ ಬರುತ್ತಿದ್ದನು ಎಂದರೆ ಸರಿಯಲ್ಲ. ಲಾರಿಯ ಮಾಲೀಕನ ಮನೆ ಅಲ್ಲೆ ಇರುವುದರಿಂದ ಪ್ರತಿನಿತ್ಯ ಸದರಿ ಲಾರಿಯನ್ನು ಸಂಗಣ್ಣನವರ ಮನೆಯ ಪಕ್ಕದಲ್ಲಿಯೇ ನಿಲ್ಲಿಸುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಸದರಿ ಲಾರಿಯನ್ನು ಪಾರ್ಕಿಂಗ್ ಸ್ಥಳಲ್ಲಿ ನಿಲ್ಲಿಸುವುದಕ್ಕೆ ಚಾಲಕನು ಲಾರಿಯನ್ನು ಎಡಬದಿಗೆ ತೆಗೆದು ಕೊಳ್ಳುತ್ತಾ ಇದ್ದ ಎಂದರೆ

ಸರಿಯಲ್ಲ. ಆ ದಿನದಂದು ನಮ್ಮ ದ್ವಿಚಕ್ರವನ್ನು ಲಾರಿಯ ಎಡಬದಿಯಲ್ಲಿ ಸದರಿ ಈರೇಶ ಚಲಾಯಿಸಿ ರಸ್ತೆಯ ಅಂಚಿನ ಮೇಲೆ ಹೋಗಿ ನಿಯಂತ್ರಣವನ್ನು ಕಳೆದು ಕೊಂಡಿದ್ದರಿಂದ ನಾನು ಚರಂಡಿಯೊಳಗೆ ಬಂದ್ದಿರುತ್ತೇನೆ ಎಂದರೆ ಸರಿಯಲ್ಲ. ಈರಶೇನ ತಪ್ಪಿನಿಂದ ಅಪಘಾತವಾಗಿದ್ದರಿಂದ ಎರಡು ದಿನಗಳ ಕಾಲ ದೂರನ್ನು ಕೊಡದೇ ವಿಳಂಬ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ತಪ್ಪಿನಿಂದಲೇ ಅಪಘಾತವಾಗಿದ್ದರಿಂದ ಎರಡು ದಿನಗಳ ಕಾಲ ದೂರು ಕೊಡದೇ ನಂತರ ಪೋಲಿಸರ ಮೇಲೆ ಒತ್ತಡ ಪ್ರಭಾವ ಬೀರಿ ಸುಳ್ಳು ದೂರನ್ನು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಲಾರಿಗೂ ಹಾಗೂ ನಮ್ಮ ದ್ವಿಚಕ್ರ ವಾಹನಕ್ಕೆ ಯಾವುದೇ ಡಿಕ್ಕಿ ಆಗದೇ ಇದ್ದುದರಿಂದ ಲಾರಿಗೆ ಯಾವುದೇ ಜಖಂಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ.

ನಮ್ಮ ಕುಟುಂಬಕ್ಕೆ ಬಿಪಿಎಲ್ ಪಡಿತರ ಚೀಟಿ ಇದೆ. ಆರ್ಥಿಕವಾಗಿ ಹಿಂದುಳಿದವರಿಗೆ ಮತ್ತು ಬಡತನ ರೇಖೆಗಿಂತ ಕೆಳಗಿರುವವರಿಗೆ ಬಿಪಿಎಲ್ ಕಾರ್ಡು ಕೊಡುತ್ತಾರೆ ಎಂದರೆ ಸರಿ . ನನ್ನ ಆದಾಯ ತಿಂಗಳಿಗೆ 30 ಸಾವಿರ ಇದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ.

ನಾನು ಶಿವಮೊಗ್ಗದ ಮೆಗ್ಗಾನ ಆಸ್ಪತ್ರೆಯಲ್ಲಿ 15 ದಿನಗಳ ಕಾಲ ಒಳರೋಗಿಯಾಗಿ ದಾಖಲಾಗಿದ್ದೆ. ಮೆಗ್ಗಾನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಕೊಂಡ ನಂತರ ದಾವಣಗೆರೆಯ ಎಸ್ ಎಸ್ ಐ ಎಂ ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಕೊಂಡಿದ್ದೇನೆ. ಅಲ್ಲಿ ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆಯಲು ಹೋಗಿದ್ದೇನು. ಆ ಸಂಧರ್ಬದಲ್ಲಿ ನಾನು ಮೆಗ್ಗಾನ್ ಆಸ್ಪತ್ರೆಯ ದಾಖಲೆಗಳನ್ನು ತೆಗೆದು ಕೊಂಡು ಹೋಗಿದ್ದೆ. ಆಗ ನನ್ನ ಮಗನು ಅಪಘಾತ ಹೇಗೆ , ಎಲ್ಲಿ ಮತ್ತು ಯಾರಿಂದ ಆಯಿತು ಎಂದು ವೈದ್ಯರಿಗೆ ಮಾಹಿತಿಯನ್ನು ಅವನೇ ಕೊಟ್ಟಿರುತ್ತಾನೆ. ಸದರಿ ವೈದ್ಯರ ಬಳಿ ಕೇವಲ ಒಂದು ಬಾರಿ ಹೋಗಿರುತ್ತೇನೆ ಎಂದರೆ ಸರಿ. ಅಪಘಾತದಿಂದಾದ ಗಾಯಗಳಿಗೆ ಚಿಕಿತ್ಸೆ ಪಡೆಯಲು ಸುಮಾರು 90 ಸಾವಿರ ರೂಪಾಯಿ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಕರೂರು ಗ್ರಾಮದಿಂದ ಬಂದಿರುತ್ತೇನೆ. ಪ್ರತಿ ನಿತ್ಯದ ಕಾರ್ಯಗಳನ್ನು ನಾನೇ ಮಾಡಿಕೊಳ್ಳುತ್ತಿದ್ದೇನೆ ಎಂದರೆ ಸಾಕ್ಷಿ ಮೊದಲು ಮಾಡಿಕೊಳುತ್ತಿದ್ದೆ ಈಗ ಮಾಡಿಕೊಳ್ಳಲು ಕಷ್ಟ ಆಗುತ್ತಿದೆ ಎಂದು ನುಡಿಯುತ್ತಾರೆ. ನನಗೆ ಯಾವುದೇ ರೀತಿಯ ಅಂಗನ್ಯೂನ್ಯತೆ ಉಂಟಾಗಿಲ್ಲ ವೈದ್ಯರೊಂದಿಗೆ ಮೀಲಾಪೆಯಾಗಿ ಸುಳ್ಳು ಅಂಗನ್ಯೂನತೆ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಈರೇಶನ ತಪ್ಪಿನಿಂದ ಅಪಘಾತವಾಗಿದ್ದರಿಂದ 1 ನೇ ಎದುರುದಾರರಿಂದ ಯಾವುದೇ ಪರಿಹಾರ ಪಡೆಯಲು ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರಿಗೆ ತೊಂದರೆ ಮತ್ತು ಅನಾನುಕೂಲ ಮಾಡುವ ಉದ್ದೇಶದಿಂದ ಅಪಘಾತವು ಭಧ್ರಾವತಿಯಲ್ಲಿ ಆಗಿದ್ದರೂ ಸಹ ಮತ್ತು ನಾನು ದಾನವಾಡಿ ವಾಸಿಯಾಗಿದ್ದರೂ ಸಹ ಸುಳ್ಳು

ವಿಳಾಸವನ್ನು ತೋರಿಸಿ ಈ ನ್ಯಾಯಾಲಯದಲ್ಲಿ ಅರ್ಜಿ ಹಾಕಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಕೇಳಿಕೊಂಡ ಪರಿಹಾರಗಳಿಗೆ ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.